


# ಶಕ್ತಿ ಮತ್ತು ಯುಕ್ತಿ

■ ಅರವಿಂದ ಜಿ. ಜೋಷಿ
ಕಲೆ: ಸಂತೋಷ್ ಸಸಿಹಿತ್ಲು

ಶ್ರೀವನೇರಿ ಎಂಬುದು ದಟ್ಟ ಅರಣ್ಯ. ಆ ಅರಣ್ಯದಲ್ಲಿ ಎಲ್ಲಿ ನೋಡಿದರತ್ತ ಆಕಾಶದೆತ್ತರಕ್ಕೆ ಬೆಳೆದು ನಿಂತ ಬೃಹತ್ ಮರಗಳಿದ್ದವು. ಅಲ್ಲಿಗೆ ವರ್ಷದ ಹಿಂದೆ ಒಂದು ದೊಡ್ಡ ಆನೆ ಹಾಗೂ ಅದರ ಮರಿ ಬಂದು ಸೇರಿದ್ದವು. ದಟ್ಟವಾದ ಆ ಕಾಡಲ್ಲಿ ಯಾರ ಭಯ ಇಲ್ಲದೇ ಎರಡೂ ಆನೆಗಳು ಆರಾಮಾಗಿ ಓಡಾಡಿಕೊಂಡಿದ್ದವು. ತಾಯಿ ಆನೆಗೆ ತನ್ನಷ್ಟು ಬಲಶಾಲಿ ಯಾರೂ ಇಲ್ಲ ಎನ್ನುವ ಅಹಂ ಜೊತೆಗೆ ವಿಪರೀತ ಕೋಪವೂ ಇತ್ತು. ಒಮ್ಮೊಮ್ಮೆ ಅದಕ್ಕೆ ಕೋಪ ಬಂದರೆ ಸಾಕು, ಇಡೀ ಅರಣ್ಯವೇ ನಡುಗುವ ಹಾಗೆ ಘೀಳಿಡುತ್ತಿತ್ತು. ತನ್ನ ಕೋಪ ಶಮನ ಮಾಡಿಕೊಳ್ಳಲು ದೊಡ್ಡ ದೊಡ್ಡ ಮರಗಳನ್ನು ಉರುಳಿಸುತ್ತಿತ್ತು. ಆ ಆನೆಯ ಬೃಹದಾಕಾರ ಹಾಗೂ ರೌದ್ರಾವತಾರ ಕಂಡ ಮಿಕ್ಕ ಪ್ರಾಣಿಗಳು ದೂರದಿಂದಲೇ ಅದಕ್ಕೆ ಕಾಣದ ಅವಿತುಕೊಳ್ಳುತ್ತಿದ್ದವು ಇಲ್ಲವೇ ಓಡಿ ಹೋಗುತ್ತಿದ್ದವು. ಹೀಗಾಗಿ ಆ ಆನೆಗೆ ತಾನು ಹೊರಟಿದ್ದೇ ದಾರಿ, ಆಡಿದ್ದೇ ಆಟ ಎನ್ನುವಂತಾಗಿತ್ತು.

ಆ ಅರಣ್ಯದ ಅಂಚಿನ ಇಳಿಜಾರು ಪ್ರದೇಶದಲ್ಲಿ ಕೆಲ ಬಡ ರೈತರು ತಮ್ಮ ಹೊಲ ಗದ್ದೆಗಳಲ್ಲಿ ಕಬ್ಬು, ಶೇಂಗಾ, ಭತ್ತ, ಬಾಳೆಯನ್ನು ಬೆಳೆಯುತ್ತಿದ್ದರು. ಅವರೆಲ್ಲರೂ ಅಲ್ಲಿಯೇ ಗುಡಿಸಲು ಹಾಕಿಕೊಂಡು ವಾಸವಾಗಿದ್ದರು. ಯಾರಿಗೆ ಏನೇ ಕಷ್ಟ ಬಂದರೂ ಪರಸ್ಪರರು ಸಹಾಯ ಮಾಡಿಕೊಂಡು ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದರು. ಹೀಗಿರುವಾಗ ಒಂದು ದಿನ ಕಾಡಿನಲ್ಲಿ ಇದ್ದ ಆನೆ ತನ್ನ ಮರಿಯೊಂದಿಗೆ ಹಾಗೇ ತಿರುಗಾಡುತ್ತ ಬಂದು ಈ ಬಡ ರೈತರು ಬೆಳೆದ ಬಾಳೆ ಮತ್ತು ಕಬ್ಬಿನ ಜಾಗಕ್ಕೆ ಲಗ್ಗೆ ಇಟ್ಟು ಮನಸೋ ಇಚ್ಛೆ ತಿಂದು, ತೇಗಿದ್ದಲ್ಲದೇ ಅಲ್ಲಿಂದ ಹೋಗುವ ಮುನ್ನ ಅಳಿದುಳಿದ ಬೆಳೆಯನ್ನು ಕಾಲಿನಿಂದ ಹೊಸಕಿ ನಾಶ ಮಾಡಿದ್ದವು. ಮರುದಿನ ಈ ವಿಷಯ ಆ ಬಡ ರೈತರ ಗಮನಕ್ಕೆ ಬಂದಾಗ ಎಲ್ಲರೂ ದುಃಖದಿಂದ ಮಮ್ಮಲ ಮರುಗಿ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂದು ವ್ಯಥೆಪಡುತ್ತ ತಮ್ಮ ನಾಯಕನಲ್ಲಿಗೆ ಹೋಗಿ 'ಇದನ್ನು ಹಾಗೇ ಬಿಟ್ಟರೆ ನಮ್ಮ ಜೀವನ ನಿರ್ವಹಣೆ ಕಷ್ಟವಾಗುತ್ತದೆ. ಇದಕ್ಕೊಂದೇನಾದರೂ ಪರಿಹಾರ ಸೂಚಿಸಿ' ಎಂದು ಪರಿಪರಿಯಾಗಿ ಕೇಳಿಕೊಳ್ಳುತ್ತಾರೆ.

ಅವರ ಅಹವಾಲು ಆಲಿಸಿದ ಗುಂಪಿನ ನಾಯಕ